ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹಮಂತ್ರಿಗಳು) :

ಅ) ಇಲ್ಲ.

ಆ) ಧಾರ್ಮಿಕ ಸಂಸ್ಥೆಗಳಿಗೆ ಪೋಲೀಸ್ ಕಾಯ್ದೆ, 1963ರ ನಿಯಮ 37ರ ಅಡಿಯಲ್ಲಿ ವಿನಾಯಿತಿ ಇರುವುದಿಲ್ಲ. ಧ್ವನಿವರ್ಧಕಗಳನ್ನು ರಾತ್ರಿ 10 ರಿಂದ ಬೆಳಿಗ್ಗೆ 6ರವರೆಗೆ ಬಳಸಬಾರದೆಂಬ ಷರತ್ತಿನೊಂದಿಗೆ ಪರವಾನಗಿ ನೀಡಲಾಗುವುದು.

ಇ) ಪೋಲೀಸರು ಅವರ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಪೋಲೀಸ್ ಕಾಯ್ದೆ, 1963ರ ಅನ್ವಯವೇ ಕರ್ತವ್ಯ ನಿರ್ವಹಿಸಬೇಕಾಗುತ್ತದೆ ಹಾಗೂ ಅದರಂತೆ ಪೋಲೀಸರು ಕಡ್ಡಾಯವಾಗಿ ಪರವಾನಗಿಯ ಷರತ್ತಿನಂತೆ ಕಾಯ್ದೆಯನ್ನು ಜಾರಿಗೊಳಿಸಬೇಕೆಂದು ನಿರ್ದೇಶಿಸಿದೆ.

ಬೆಂಗಳೂರು ಪೂರ್ವ ಉತ್ತರ ಹಾಗೂ ದಕ್ಷಿಣ ವಲಯದ ಉಪ ಪೋಲೀಸ್ ಆಯುಕ್ತರುಗಳು ದುರ್ನಡತೆ

229 - ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಪೂರ್ವ, ಉತ್ತರ ಹಾಗೂ ದಕ್ಷಿಣ ವಲಯದ ಉಪ ಪೋಲೀಸ್ ಆಯುಕ್ತರುಗಳು ಭೂ ಕಬಳಿಕೆದಾರರುಗಳೊಂದಿಗೆ ಶಾಮೀಲಾಗಿ ಈ ಭೂ ಮಾಲೀಕರುಗಳು ನೀಡಿದ ದೂರಿನ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಅಧಿಕಾರ (ದುರ್ನಡತೆ) ದುರುಪಯೋಗವನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಈ ಅಧಿಕಾರಿಗಳು ತಮ್ಮ ಅಧೀನ ಸಿಬ್ಬಿಂದಿಯವರಿಗೆ ಅಪರಾಧಿಗಳ ವಿರುದ್ಧ ಯಾವುದೇ ಕ್ರಮವನ್ನು ಜರುಗಿಸಬಾರದೆಂದು ಅಥವಾ ತೆಗೆದುಕೊಳ್ಳಬಾರದೆಂದು ಸೂಚನೆಯನ್ನು ಹೊರಡಿಸಿರುವುದು ನಿಜವೇ;*

ಇ) *ದಿನಾಂಕ 12-3-95ರಂದು 'ಡೆಕ್ಕನ ಹೆರಾಲ್ಡ್' ಇಂಗ್ಲೀಷ್ ದಿನಪತ್ರಿಕೆಯಲ್ಲಿ ಅತಿರಿಕ್ತ ಪೋಲೀಸ್ ಆಯುಕ್ತರು, ಬೆಂಗಳೂರು ನಗರ ಇವರು ಈ ಉಪ ಪೋಲೀಸ್ ಆಯುಕ್ತರುಗಳು ಈ ಪ್ರಕರಣಗಳಲ್ಲಿ ಶಾಮೀಲಾಗಿರುವ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುತ್ತಾರೆಂದು ವರದಿ ಮಾಡಿರುವುದು ನಿಜವೇ, ಹಾಗಿದ್ದಲ್ಲಿ ಈ ಅಧಿಕಾರಿಗಳ ವಿರುದ್ಧ ಸರ್ಕಾರವು ತೆಗೆದುಕೊಳ್ಳಲು ಪ್ರಸ್ತಾವಿಸಿರುವ ಕ್ರಮಗಳೇನು;*

ಈ) *ಈ ಆಸ್ತಿಗಳ ನ್ಯಾಯಯುತ ಮಾಲೀಕರಿಗೆ ರಕ್ಷಣೆ ನೀಡಲು ಹಾಗೂ ಈ ಅಧಿಕಾರಿಗಳು ಶಾಮೀಲಾಗಿರುತ್ತಾರೆಂಬ ಆರೋಪದ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ.*

ಉ) *ಈ ವ್ಯವಹಾರಗಳಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಲು ಕಾರಣರಾದ ಅಧಿಕಾರಿಗಳ ಹಾಗೂ ಭೂ ಕಬಳಿಕೆದಾರರ ವಿರುದ್ಧ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು;*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಬಂದಿರುವುದಿಲ್ಲ.

ಆ) ನಿಜವಲ್ಲ.

ಇ) ಪೋಲೀಸ್ ಆಯುಕ್ತರು ಹಾಗೂ ಅತಿರಿಕ್ತ ಪೋಲೀಸ್ ಆಯುಕ್ತರು, ಬೆಂಗಳೂರು ನಗರ ಇವರುಗಳು ಈ ಆಪಾದನೆ ಸುಳ್ಳೆಂದು ಹಾಗೂ ಇದನ್ನು ತಳ್ಳಿಹಾಕುವ ಪತ್ರಿಕಾ ಹೇಳಿಕೆಯನ್ನು ಈಗಾಗಲೇ ನೀಡಿರುತ್ತಾರೆ. ಆದುದರಿಂದ ಕ್ರಮ ತೆಗೆದುಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಈ) ಮೇಲೆ (ಅ)ಗೆ ನೀಡಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಉ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದರೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

ಬೀಳಗಿ ತಾಲ್ಲೂಕಿನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ಮುಳುಗಡೆಯಾದ ಗ್ರಾಮಗಳ ಸಂಖ್ಯೆ

230 - ಶ್ರೀ ಜೆ.ಟಿ. ಪಾಟೀಲ (ಬೀಳಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಬೀಳಗಿ ತಾಲ್ಲೂಕಿನಲ್ಲಿ ಮುಳುಗಡೆಯಾಗಲಿರುವ ಗ್ರಾಮಗಳ ಸಂಖ್ಯೆ ಎಷ್ಟು, ಅವು ಯಾವುವು;

ಆ) ಮುಳುಗಡೆಯಾಗಲಿರುವ ಗ್ರಾಮಗಳ ಪುನರ್ವಸತಿಗೆ ಯೋಜನೆ ರೂಪಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಈ ಯೋಜನೆಯ ರೂಪ ರೇಖೆಗಳು ಏನು;

ಈ) ಈ ಯೋಜನೆಯ ಜಾರಿಗೆ ಎಷ್ಟು ಹಣದ ಅಂದಾಜು ಮಾಡಲಾಗಿದೆ;

ಉ) ಈ ಯೋಜನೆಯನ್ನು ಎಷ್ಟು ಬೇಗ ಪೂರ್ಣಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಬೀಳಗಿ ತಾಲ್ಲೂಕಿನಲ್ಲಿ 35 ಗ್ರಾಮಗಳು ಕೃಷ್ಣ ಮೇಲ್ದಂಡೆ ಯೋಜನೆ ಅಡಿಯಲ್ಲಿ ಮುಳುಗಡೆಯಾಗುತ್ತವೆ. ಅವುಗಳೆಂದರೆ -1) ಮಣಗೂರು 2) ಚಿನಿವಾಲಕೊಪ್ಪ 3) ಲಿಂಗಾಪುರ 4) ಹೊನ್ನಿಹಾಳ 5) ಚಿಕ್ಕ ಸಂಗಮ 6) ಥವಳೇಶ್ವರ 7) ಬಳ್ಳೂರ 8) ಹಪ್ರಹಾಳ 9) ಬೀರಕಟ್ಟಿ 10) ಕಂದಗಲ್ 11) ಕಮದಾಳ 12) ಗೋಡಿಹಾಳ 13) ಹೆಗ್ಗೂರು 14) ಕೊಪ್ಪ ಎಸ್‌ಆರ್ 15) ಮುತ್ತಲದಿನ್ನಿ 16) ಬಾದರದಿನ್ನಿ 17) ಎಕ್ಕಟ್ಟಿ 18) ಹರೆಕಲ್ 19) ಕೊರ್ತಿ 20) ಟಕ್ಕಳಕಿ 21) ಸೊನ್ನದೊಡ್ಡ ಹಾಳ 22) ರೊಳ್ಳಿ 23) ಗೋವಿನದಿನ್ನಿ 24) ಗುಂಡನಪಲ್ಲಿ 25) ಇನಾಂ ಹಂಜನಾಳ